**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೨೧.೦೬.೨೦೧೮ರಂದು ನಡೆದ ಪ್ರಶಿಕ್ಷಣ ಪರಿಷತ್ (ಅಕಾಡೆಮಿಕ್ ಕೌನ್ಸಿಲ್) ೨೩ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್‌ನ ೨೩ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಜೂನ್ ೨೧, ೨೦೧೮ರ ಗುರುವಾರ ಬೆಳಿಗ್ಗೆ ೧೧.೩೦** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ವಿದ್ವಾನ್ ರಾಮಚಂದ್ರ ನಾ. ಭಟ್ಟ,** ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೩. | **ವಿದ್ವಾನ್ ನರಸಿಂಹ ಭಟ್ಟ,** ಪ್ರಾಚಾರ್ಯರು, ಸೋಂದಾ | ಸದಸ್ಯರು |
| ೪. | **ಡಾ. ಎಸ್.ಎನ್. ಸಂಪತ್ಕುಮಾರ್,** ಪ್ರಾಚಾರ್ಯರು(ಪ್ರ), ಬೆಂಗಳೂರು | ಸದಸ್ಯರು |
| ೫. | **ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ,** ಪ್ರಾಚಾರ್ಯರು, ಧಾರವಾಡ | ಸದಸ್ಯರು |
| ೬. | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ,** ಡೀನ್, ವೇದಾಂತ ನಿಕಾಯ | ಸದಸ್ಯರು |
| ೭. | **ಡಾ. ಬಿ.ವಿ ವೆಂಕಟರಮಣ,** ಡೀನ್, ಶಾಸ್ತ್ರ ನಿಕಾಯ | ಸದಸ್ಯರು |
| ೮. | **ಶ್ರೀಮತಿ ಎಂ. ಶಿಲ್ಪ,** ಕ.ಆ.ಸೇ., ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಡಾ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | | ವಿಷಯ ಮತ್ತು ಟಿಪ್ಪಣಿ ಮತ್ತು ನಿರ್ಣಯ |
|---|---|---|
| ವಿಷಯ 01 | **ವಿಷಯ ಮತ್ತು ಟಿಪ್ಪಣಿ** | **ವಿಶ್ವವಿದ್ಯಾಲಯದಲ್ಲಿ ಐದು ವಿಭಾಗಗಳನ್ನು ತೆರೆದಿರುವ ಬಗೆಗೆ.**<br>ದಿನಾಂಕ 01.04.2017ರಂದು ನಡೆದ 37ನೇ ಪ್ರಶಾಸನ ಸಮಿತಿ ಸಭೆಯಲ್ಲಿ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳನ್ನು ಐದು ವಿಭಾಗಗಳಲ್ಲಿ ತಾತ್ಕಾಲಿಕವಾಗಿ ಸ್ಥಿರೀಕರಣಗೊಳಿಸಲಾಗಿತ್ತು. ವಿಶ್ವವಿದ್ಯಾಲಯದ ಅನುದಾನ ಆಯೋಗ(ಯು.ಜಿ.ಸಿ)ದಿಂದ 12ಬಿ ಮಾನ್ಯತೆಯನ್ನು ಪಡೆಯಬೇಕಾದರೆ 5 ವಿಭಾಗಗಳಿರುವುದು ಕಡ್ಡಾಯವಾದುದರಿಂದ ಭಾಷಾ–ಶಾಸ್ತ್ರ–ವೇದಾಂತ ನಿಕಾಯಗಳ ಅಡಿಯಲ್ಲಿ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗ, ಹಸ್ತಪ್ರತಿಶಾಸ್ತ್ರ ವಿಭಾಗ, ಅಲಂಕಾರ ಶಾಸ್ತ್ರ ವಿಭಾಗ, ನ್ಯಾಯ ಮತ್ತು ವೈಶೇಷಿಕ ವಿಭಾಗ, ವೇದಾಂತ ವಿಭಾಗಗಳೆಂದು ಐದು ವಿಭಾಗಗಳನ್ನು ತೆರೆಯಲು ಪ್ರಶಿಕ್ಷಣ ಮತ್ತು ಪ್ರಶಾಸನ ಸಮಿತಿಗಳ ಒಪ್ಪಿಗೆ ಪಡೆದು ಅರ್ಜಿ ಆಹ್ವಾನಿಸಿ, ಅಧ್ಯಾಪಕರನ್ನು ನಿಯಮಾನುಸಾರ ತುಂಬಲಾಗಿದೆ. ಈಗ ಅಧ್ಯಾಪಕರ ಶಿಸ್ತು ಮತ್ತು ಸೇವಾ ಅನುಭವವನ್ನು ಗಮನದಲ್ಲಿರಿಸಿಕೊಂಡು, ವಿಭಾಗದ ಅಧ್ಯಕ್ಷರ ಜೊತೆಯಲ್ಲಿಯೇ ಖಾಯಂ ಆಗಿ ಸ್ಥಿರೀಕರಿಸಲಾಗಿದೆ. ಅದರನ್ವಯ, ಈ ಕೆಳಕಂಡಂತೆ ವಿಶ್ವವಿದ್ಯಾಲಯದ ಶೈಕ್ಷಣಿಕ ಸಿಬ್ಬಂದಿಗಳನ್ನು ವಿಭಾಗವಾರು ವಿಂಗಡಿಸಿ ಖಾಯಂ ಆಗಿ ಸ್ಥಿರೀಕರಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |

| ನಿಕಾಯ | ವಿಭಾಗ | ಪ್ರಾಧ್ಯಾಪಕರು | ಸಹ ಪ್ರಾಧ್ಯಾಪಕರು | ಸಹಾಯಕ ಪ್ರಾಧ್ಯಾಪಕರು |
|---|---|---|---|---|
| **ಭಾಷಾ ನಿಕಾಯ** | ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗ | ಪ್ರೊ. ವಿ. ಗಿರೀಶ್‌ಚಂದ್ರ **(ವಿಭಾಗ ಮುಖ್ಯಸ್ಥರು)** | ಡಾ. ಸಿ. ಪಾಲಯ್ಯ | 1. ಡಾ. ಕೃಷ್ಣ ವಿ. ಜೋಶಿ |
| | | | | 2. ಡಾ. ರೇಖಾದೇವಿ ಎಸ್.ಎಚ್. |
| | | | | 3. ಪರಿತೋಷ್‌ದಾಸ್ |
| | | | | 4. ಡಾ. ಜಯರೇವಣ್ಣ |

| | | | | |
|---|---|---|---|---|
| | ಹಸ್ತಪ್ರತಿಶಾಸ್ತ್ರ ವಿಭಾಗ | | | 1. ಡಾ. ವಿನಾಯಕ ನಾಮಣ್ಣವರ **(ವಿಭಾಗ ಮುಖ್ಯಸ್ಥರು)**<br>2. ಡಾ. ಪ್ರಭುಸ್ವಾಮಿ<br>3. ಡಾ. ರಾಮಕೃಷ್ಣ ಭಟ್ಟ ಕೆ. |
| **ಶಾಸ್ತ್ರ ನಿಕಾಯ** | ನ್ಯಾಯ ಮತ್ತು ವೈಶೇಷಿಕ | ಪ್ರೊ. ಶ್ರೀನಿವಾಸ ವರಖೇಡಿ | ಡಾ. ವೆಂಕಟರಮಣ ಬಿ.ವಿ. **(ವಿಭಾಗ ಮುಖ್ಯಸ್ಥರು)** | 1. ಡಾ. ಭಾಸ್ಕರ ಭಟ್ಟ ಜೋಶಿ<br>2. ಡಾ. ಕೆ. ಈ. ವೆಂಕಟನಾಥನ್<br>3. ಡಾ. ವಿ.ಎಸ್.ಆರ್. ಲಕ್ಷ್ಮಿ ವೆಲುವರತಿ |
| | ಅಲಂಕಾರಶಾಸ್ತ್ರ ವಿಭಾಗ | | | 1. ವಿದ್ವಾನ್ ಋಷಿದೇವ ಭಾರ್ಗವ ಎನ್. **(ವಿಭಾಗ ಮುಖ್ಯಸ್ಥರು)**<br>2. ಡಾ. ವನರಾಜ ಬಿ.ಕೆ<br>3. ವಿದ್ವಾನ್ ಭೀಮಾ ನಾಯ್ಕ |
| **ವೇದಾಂತ ನಿಕಾಯ** | ವೇದಾಂತ ವಿಭಾಗ | | ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ **(ವಿಭಾಗ ಮುಖ್ಯಸ್ಥರು)** | 1. ಡಾ. ಪಿ. ವಿನಯ್<br>2. ಡಾ. ಮಂಜುನಾಥ ಭಟ್ಟ<br>3. ಡಾ. ಶರತ್‌ಚಂದ್ರಸ್ವಾಮಿ |

| | | |
|---|---|---|
| | ನಿರ್ಣಯ | **ವಿಶ್ವವಿದ್ಯಾಲಯದ ಶೈಕ್ಷಣಿಕ ಸಿಬ್ಬಂದಿಗಳನ್ನು ವಿಭಾಗವಾರು ವಿಂಗಡಿಸಿ ಖಾಯಂ ಆಗಿ ಸ್ಥಿರೀಕರಿಸಲು ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 02 | **ವಿಷಯ ಮತ್ತು ಟಿಪ್ಪಣಿ** | **ವಿಶ್ವವಿದ್ಯಾಲಯದಲ್ಲಿ ವ್ಯಾಕರಣ ವಿಭಾಗವನ್ನು ತೆರೆಯುವ ಬಗೆಗೆ.**<br>ದಿನಾಂಕ 01.04.2017ರಂದು ನಡೆದ 37ನೇ ಪ್ರಶಾಸನ ಸಮಿತಿ ಸಭೆಯ ನಿರ್ಣಯದಂತೆ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳನ್ನು ಐದು ವಿಭಾಗಗಳಲ್ಲಿ ತಾತ್ಕಾಲಿಕವಾಗಿ ಸ್ಥಿರೀಕರಣಗೊಳಿಸಲಾಗಿತ್ತು ಹಾಗೂ ಹೆಚ್ಚಿನ ವಿಭಾಗಗಳು ತೆರೆದಾಗ ಮರುಸ್ಥಿರೀಕರಣಕ್ಕೆ ಅವಕಾಶ ಕಲ್ಪಿಸಿಕೊಳ್ಳಲಾಗಿತ್ತು. ಈಗ ವಿಭಾಗಗಳು ಅಧಿಕೃತಗೊಂಡಿದ್ದು ಅಧ್ಯಾಪಕರನ್ನು ಖಾಯಂ ಆಗಿ ಸ್ಥಿರೀಕರಣಗೊಳಿಸಲಾಗಿದೆ. ಆದರೆ ವ್ಯಾಕರಣವನ್ನೇ ಅಭ್ಯಾಸ ಮಾಡಿರುವ ಡಾ. ಶಿವಾನಿ, ಸಹಪ್ರಾಧ್ಯಾಪಕರು, ಡಾ. ಅನುಪಮಾ ಬಿ, ಸಹಾಯಕ ಪ್ರಾಧ್ಯಾಪಕರು – ಇವರನ್ನು ಯಾವುದೇ ವಿಭಾಗದಲ್ಲಿ ಸ್ಥಿರೀಕರಣಗೊಳಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಆರನೇ ವಿಭಾಗವಾಗಿ ವ್ಯಾಕರಣ ವಿಭಾಗವನ್ನು ತೆರೆದು ಈ ಅಧ್ಯಾಪಕರನ್ನು ಸ್ಥಿರೀಕರಣಗೊಳಿಸುವುದು ಅನಿವಾರ್ಯ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದಲ್ಲಿ ವ್ಯಾಕರಣ ವಿಭಾಗವನ್ನು ತೆರೆಯಲು ಮತ್ತು ಅಧ್ಯಾಪಕರನ್ನು ಸ್ಥಿರೀಕರಣಗೊಳಿಸಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 03 | **ವಿಷಯ ಮತ್ತು ಟಿಪ್ಪಣಿ** | **2018–19ನೇ ಸಾಲಿನ ಶಾಸ್ತ್ರೀ–ಬಿ.ಎ, ಆಚಾರ್ಯ–ಎಂ.ಎ, ಬಿ.ಎ – ಸಂಸ್ಕೃತ, ಎಂ.ಎ – ಸಂಸ್ಕೃತ, ಸರ್ಟಿಫಿಕೇಟ್, ಡಿಪ್ಲೋಮಾ, ಪಿ.ಜಿ. ಡಿಪ್ಲೋಮಾ ತರಗತಿಗಳನ್ನು ಆರಂಭಿಸುವ ಬಗೆಗೆ.**<br>ಘಟಕ ಹಾಗೂ ಸಂಬದ್ಧ ಮಹಾವಿದ್ಯಾಲಯಗಳಲ್ಲಿ 2018–19ನೇ ಶೈಕ್ಷಣಿಕ ಸಾಲಿನ ಅವಧಿಗೆ ಬಿ.ಎ–ಶಾಸ್ತ್ರೀ ಹಾಗೂ ಎಂ.ಎ–ಆಚಾರ್ಯ ಪದವಿಗಳಿಗಾಗಿ ಹಾಗೂ ವಿಶ್ವವಿದ್ಯಾಲಯದಲ್ಲಿ ಭಾಷಾ–ಶಾಸ್ತ್ರ–ವೇದಾಂತ ನಿಕಾಯಗಳ ಅಡಿಯಲ್ಲಿ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗ, ಹಸ್ತಪ್ರತಿಶಾಸ್ತ್ರ ವಿಭಾಗ, ಅಲಂಕಾರ ಶಾಸ್ತ್ರ ವಿಭಾಗ, ನ್ಯಾಯ ಮತ್ತು ವೈಶೇಷಿಕ ವಿಭಾಗ, ವೇದಾಂತ ವಿಭಾಗಗಳ ಅಡಿಯಲ್ಲಿ ಬಿ.ಎ – ಸಂಸ್ಕೃತ, ಎಂ.ಎ – ಸಂಸ್ಕೃತ, ಸರ್ಟಿಫಿಕೇಟ್, ಡಿಪ್ಲೋಮಾ ಹಾಗೂ ಪಿ.ಜಿ. ಡಿಪ್ಲೋಮಾ ತರಗತಿಗಳನ್ನು ಆರಂಭಿಸಲು ಅಧಿಸೂಚನೆ ಹೊರಡಿಸಿದೆ. ಇದಕ್ಕೆ ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | **2018–19ನೇ ಸಾಲಿನ ಶಾಸ್ತ್ರೀ–ಬಿ.ಎ, ಆಚಾರ್ಯ–ಎಂ.ಎ, ಬಿ.ಎ – ಸಂಸ್ಕೃತ, ಎಂ.ಎ – ಸಂಸ್ಕೃತ, ಸರ್ಟಿಫಿಕೇಟ್, ಡಿಪ್ಲೋಮಾ, ಪಿ.ಜಿ. ಡಿಪ್ಲೋಮಾ ತರಗತಿಗಳನ್ನು ಆರಂಭಿಸಲು ಪ್ರಕಟಿಸಿದ್ದ ಅಧಿಸೂಚನೆಗೆ ಸಭೆಯು ಒಪ್ಪಿಗೆ ನೀಡಿದೆ.** |

| | | |
|---|---|---|
| ವಿಷಯ 04 | **ವಿಷಯ ಮತ್ತು ಟಿಪ್ಪಣಿ** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರಾಕೃತ ಭಾಷೆಯ ಪ್ರತ್ಯೇಕ ವಿಭಾಗವನ್ನು ತೆರೆಯುವ ಬಗೆಗೆ.**<br>ಭಾರತ ದೇಶದ ಅತ್ಯಂತ ಪುರಾತನ ಭಾಷೆಗಳಲ್ಲಿ ಪ್ರಾಕೃತ ಭಾಷೆಯೂ ಒಂದಾಗಿದೆ. ಸಂಸ್ಕೃತದಂತೆ ಪ್ರಾಕೃತ ಭಾಷೆಯೂ ಅನೇಕ ಆಧುನಿಕ ಭಾಷೆಗಳ ಜನನಿಯಾಗಿದೆ. ಈ ಪ್ರಾಕೃತ ಭಾಷೆಯೂ ಸರ್ವತ್ರ ಭಾರತದಲ್ಲಿ ವ್ಯಾಪ್ತವಾಗಿತ್ತೆಂದು ತಿಳಿದುಬರುತ್ತದೆ. ಈ ಭಾಷೆಯೂ ಸಾಹಿತ್ಯ, ದರ್ಶನ ಮುಂತಾದ ಸಾಹಿತ್ಯಗಳಿಂದ ಅತ್ಯಂತ ಸಮೃದ್ಧವಾಗಿದೆ. ವಿಶೇಷವಾಗಿ ಜೈನದರ್ಶನದ ಪ್ರಾಚೀನ ಗ್ರಂಥಗಳು ಪ್ರಾಕೃತ ಭಾಷೆಯಲ್ಲಿಯೇ ಇವೆ. ಇಂತಹ ಪ್ರಾಕೃತ ಭಾಷೆಯಲ್ಲಿ ಸಂಶೋಧನೆ, ಅಧ್ಯಯನ ಹಾಗೂ ಅಧ್ಯಾಪನಗಳು ವಿಶ್ವವಿದ್ಯಾಲಯಗಳಲ್ಲಿ ಬಹುತೇಕ ಸ್ಥಗಿತಗೊಂಡಿದ್ದು ಪ್ರಾಕೃತ ಭಾಷೆಯ ಸ್ವತಂತ್ರ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವಂತೆ ಕರ್ನಾಟಕ ಸರಕಾರಕ್ಕೆ ಪ್ರಸ್ತಾವನೆ ಬಂದ ಹಿನ್ನೆಲೆಯಲ್ಲಿ, ಮೇಲ್ಕಂಡ ಉಲ್ಲೇಖದಂತೆ ಉನ್ನತ ಶಿಕ್ಷಣ ಇಲಾಖೆ (ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್), ಕರ್ನಾಟಕ ಶಿಕ್ಷಣ ಸಚಿವಾಲಯವು ಪ್ರಸ್ತಾವನೆಯನ್ನು ಪರಿಶೀಲಿಸಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿಯೇ ಪ್ರಾಕೃತ ಭಾಷೆಯ ಸಂಶೋಧನೆ, ಅಧ್ಯಯನ ಹಾಗೂ ಅಧ್ಯಾಪನದ ವ್ಯವಸ್ಥೆಗಾಗಿ ಪ್ರತ್ಯೇಕ ವಿಭಾಗವನ್ನು ಸ್ಥಾಪಿಸುವಂತೆ ಅಧಿಕೃತವಾಗಿ ವರದಿಯನ್ನು ಕೇಳಿ ಪತ್ರ ಸಂಖ್ಯೆ: ಇಡಿ 328 ಯುಎನ್ಇ 2017, ದಿನಾಂಕ: 16.08.2017 ಹಾಗೂ ಸರ್ಕಾರದ ಪತ್ರ ಸಂಖ್ಯೆ: ಕರಾಉಶಿಪ/76/ಪ್ರಾಕೃತ ಭಾಷೆ/2016–17/965, ದಿನಾಂಕ: 12.06.17ರಲ್ಲಿ ತಿಳಿಸಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮದ 7ನೇ ಅಧ್ಯಾಯದಲ್ಲಿ ಭಾಷಾ ನಿಕಾಯದಲ್ಲಿ ಪಾಲಿ, ಪ್ರಾಕೃತ ವಿಭಾಗಗಳನ್ನು ತೆರೆಯಲು ಅವಕಾಶವಿದ್ದು, ಇದನ್ನು ಅನುಷ್ಠಾನಗೊಳಿಸಬಹುದಾಗಿದೆ.<br>ಪ್ರಾಕೃತ ಭಾಷಾತಜ್ಞರ ಅಧ್ಯಯನ ಮಂಡಳಿ ರಚಿಸಿ, ಪಾಠ್ಯಕ್ರಮವನ್ನು ಅನುಷ್ಠಾನಗೊಳಿಸಬಹುದಾಗಿದ್ದು, ಆ ಮೂಲಕ ಸರ್ಟಿಫಿಕೇಟ್ ಹಾಗೂ ಎಂ.ಎ. ತರಗತಿಗಳನ್ನು ಆರಂಭಿಸಲು ಒಪ್ಪಿಗೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರಾಕೃತ ಭಾಷೆಯ ಪ್ರತ್ಯೇಕ ವಿಭಾಗವನ್ನು ತೆರೆಯಲು ಈ ಕೆಳಕಂಡಂತೆ ಅಧ್ಯಯನ ಮಂಡಳಿಯನ್ನು ರಚಿಸಲಾಯಿತು.**<br>**1. ಪ್ರೊ. ವಿ ಗಿರೀಶ್ ಚಂದ್ರ, ಡೀನ್, ಭಾಷಾನಿಕಾಯ – ಅಧ್ಯಕ್ಷರು**<br>**2. ಶತಾವಧಾನಿ ಡಾ. ಆರ್ ಗಣೇಶ್, ಬೆಂಗಳೂರು – ಸದಸ್ಯರು**<br>**3. ಡಾ. ವೇಣೀಮಾಧವ ಶಾಸ್ತ್ರೀ, ಧಾರವಾಡ – ಸದಸ್ಯರು**<br>**4. ಡಾ. ಸುರೇಶ್ ಕುಮಾರ್, ಮೈಸೂರು – ಸದಸ್ಯರು**<br>**5. ಪ್ರೊ. ಪದ್ಮಾಶೇಖರ್, ನಿವೃತ್ತ ವಿಭಾಗಾಧ್ಯಕ್ಷರು, ಜೈನಾಲಜಿ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮೈಸೂರು, – ಸದಸ್ಯರು**<br>**6. ಡಾ. ಕುಸುಮ, ಪ್ರಾಕೃತ ವಿದ್ಯಾಪೀಠ, ಶ್ರವಣಬೆಳಗೊಳ – ಸದಸ್ಯರು** |
| ವಿಷಯ 05 | **ವಿಷಯ ಮತ್ತು ಟಿಪ್ಪಣಿ** | **ವಿಶ್ವವಿದ್ಯಾಲಯದಲ್ಲಿ ಮತ್ತು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಯೋಗ ಸರ್ಟಿಫಿಕೇಟ್ ಪ್ರಾರಂಭಿಸುವ ಬಗೆಗೆ.**<br>2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ಮತ್ತು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಯೋಗ ಸರ್ಟಿಫಿಕೇಟ್ ಅಥವಾ ಯೋಗ ಡಿಪ್ಲೊಮಾ ಪದವಿಯನ್ನು ಪ್ರಾರಂಭಿಸಲು ವಿಶ್ವವಿದ್ಯಾಲಯವು ಉದ್ದೇಶಿಸಿದೆ. ಈ ಪದವಿಗೆ ವಿಶ್ವವಿದ್ಯಾಲಯ ಅನುದಾನ ಆಯೋಗವು ನಿಗದಿಪಡಿಸಿದ ಪಾಠ್ಯಕ್ರಮವನ್ನು ಅನುಸರಿಸಲಾಗುವುದು. 2018–19ನೇ ಸಾಲಿನಲ್ಲಿ ಯೋಗ ಸರ್ಟಿಫಿಕೇಟ್ ಕೋರ್ಸ್ ನ್ನು ಪ್ರಾರಂಭಿಸಲು ಮತ್ತು ಪಠ್ಯಕ್ರಮವನ್ನು ಅನುಮೋದಿಸಲು ಪ್ರಶಿಕ್ಷಣ ಪರಿಷತ್ತಿನ ಮುಂದೆ ಮಂಡಿಸಿದೆ. |
| | ನಿರ್ಣಯ | **ಯೋಗ ಸರ್ಟಿಫಿಕೇಟ್ ಕೋರ್ಸ್‌ನ್ನು ವಿಶ್ವವಿದ್ಯಾಲಯದಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು. ಈ ಕೋರ್ಸ್‌ನ್ನು ಸಂಯೋಜಿತ ಕಾಲೇಜುಗಳಲ್ಲಿ ಪದವಿ ತರಗತಿಗಳ ಯಾವುದಾದರೂ ಒಂದು ವರ್ಷದಲ್ಲಿ ಪೂರೈಸಿಕೊಳ್ಳಲು ಸಭೆಯು ಸೂಚಿಸಿತು.** |
| ವಿಷಯ 06 | **ವಿಷಯ ಮತ್ತು ಟಿಪ್ಪಣಿ** | **ವಿಶ್ವವಿದ್ಯಾಲಯದಲ್ಲಿ ಶಾಬ್ದಬೋಧ ಡಿಪ್ಲೊಮಾ ಪದವಿಯನ್ನು ಪ್ರಾರಂಭಿಸುವ ಬಗೆಗೆ.**<br>2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ಶಾಬ್ದಬೋಧ ಡಿಪ್ಲೊಮಾ ಪದವಿಯನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, ಪಾಠ್ಯಕ್ರಮವನ್ನು ಸಿದ್ಧಪಡಿಸಲಾಗಿದ್ದು, ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದಲ್ಲಿ ಶಾಬ್ದಬೋಧ ಡಿಪ್ಲೊಮಾ ಕೋರ್ಸ್‌ಗೆ ಕನಿಷ್ಠ 5 ವಿದ್ಯಾರ್ಥಿಗಳಿಗೆ ಕಡಿಮೆಯಿಲ್ಲದಂತೆ ನೋಂದಣಿಯಾದಲ್ಲಿ ಈ ಕೋರ್ಸ್‌ನ್ನು ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.** |

| | | |
|---|---|---|
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ಪಿಎಚ್.ಡಿ (ವಿದ್ಯಾವಾರಿಧಿ) ಪದವಿಯ ನಿಯಮಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಸರ್ಕಾರಿ ಆದೇಶ ಸಂಖ್ಯೆ:ಇಡಿ 342 ಯುಎನ್ಇ 2017 ರಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 18ನೇ ಸಾಮಾನ್ಯ ಸಭೆಯಲ್ಲಿ **Consideration of UGC Minimum Standards and Procedure for Award of M.Phil/Ph.D Regulations – 2016** ಸಂಬಂಧಪಟ್ಟಂತೆ (ಸರ್ಕಾರವು ಉಲ್ಲೇಖಿತ ಆದೇಶದಲ್ಲಿ ಲಗತ್ತಿಸಿದ್ದ) ಸಿದ್ಧಪಡಿಸಲಾದ ಏಕರೂಪದ ಮಾದರಿ ಮಾರ್ಗದರ್ಶಿ ಕರಡು ನಿಯಮಾವಳಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಬೇಕಾಗಿದೆ. ಪಿಎಚ್.ಡಿ. ಮಾರ್ಗದರ್ಶಕರಿಗೆ ಸಂಬಂಧಿಸಿದ ನಿಯಮಾವಳಿಗಳನ್ನು ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಅನುಷ್ಠಾನಕ್ಕೆ ತರಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಪಿಎಚ್.ಡಿ (ವಿದ್ಯಾವಾರಿಧಿ) ಪದವಿಯ ನಿಯಮಾವಳಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಸಭೆಯು ಅನುಮೋದಿಸಿತು.** |
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಸ್ಪರ್ಧೆಗಳ ಕುರಿತಾಗಿ ಪರಿನಿಯಮವನ್ನು ರಚಿಸುವ ಬಗೆಗೆ.**<br>ಅನೇಕ ವರ್ಷಗಳಿಂದ ವಿಶ್ವವಿದ್ಯಾಲಯವು ರಾಜ್ಯ ಹಾಗೂ ರಾಷ್ಟ್ರ ಸ್ತರದಲ್ಲಿ ಶಾಸ್ತ್ರೀಯ ಸ್ಪರ್ಧೆಗಳನ್ನು ಆಯೋಜಿಸುತ್ತಾ ಹಾಗೂ ಭಾಗವಹಿಸುತ್ತಾ ಬಂದಿದೆ. ಸ್ಪರ್ಧೆಗಳಲ್ಲಿ ಭಾಗವಹಿಸಲು ಹಾಗೂ ಸ್ಪರ್ಧೆಗಳನ್ನು ಆಯೋಜಿಸಲು ಸ್ಪಷ್ಟವಾದ ನಿಯಮಾವಳಿಗಳನ್ನು ರೂಪಿಸುವ ಸಂಬಂಧ ಪರಿನಿಯಮವನ್ನು ರಚಿಸಬಹುದಾಗಿದೆ. ಪರಿನಿಯಮವನ್ನು ರಚಿಸಲು ಸಮಿತಿಯನ್ನು ರಚಿಸಬೇಕಿರುತ್ತದೆ. ಈ ಸಂಬಂಧ ಸಭೆಯಲ್ಲಿ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಸ್ಪರ್ಧೆಗಳ ಕುರಿತಾಗಿ ಪರಿನಿಯಮವನ್ನು ರಚಿಸುವ ಬಗ್ಗೆ ಸಭೆಯು ಅನುಮೋದನೆ ನೀಡಿತು. ಈ ಪರಿನಿಯಮವನ್ನು ರಚಿಸಲು ಈ ಕೆಳಕಂಡಂತೆ ಸಮಿತಿಯನ್ನು ರಚಿಸಲು ಸಭೆಯು ಸೂಚಿಸಿತು.**<br>1. **ಶ್ರೀ ಸುಂದರ್ ರಾಜ್ ಗುಪ್ತಾ – ಅಧ್ಯಕ್ಷರು**<br>2. **ಶ್ರೀ ಯು.ಬಿ.ಉಳವಿ – ಸದಸ್ಯರು**<br>3. **ಶ್ರೀ ಸತ್ಯನಾರಾಯಣ – ಸದಸ್ಯರು**<br>4. **ಶ್ರೀ ವೆಂಕಟೇಶ್ ವಿ – ಸದಸ್ಯ ಸಂಚಾಲಕರು** |
| ವಿಷಯ 09 | ವಿಷಯ ಮತ್ತು ಟಿಪ್ಪಣಿ | **ಅಧ್ಯಯನ ಮಂಡಳಿಗಳನ್ನು ಹಾಗೂ ಪಾಠ್ಯಕ್ರಮವನ್ನು ಅನುಮೋದಿಸುವ ಬಗೆಗೆ.**<br>2018–19ನೇ ಸಾಲಿನ ವಿವಿಧ ಐದು ವಿಭಾಗಗಳನ್ನು ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ ಆಯಾ ವಿಭಾಗಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಗಳನ್ನು ರಚಿಸಲಾಗಿದೆ ಹಾಗೂ ಆಯಾ ವಿಭಾಗಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ತರಗತಿಗಳ ಪಾಠ್ಯಕ್ರಮವನ್ನು ರಚಿಸಲಾಗಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಅಧ್ಯಯನ ಮಂಡಳಿಗಳನ್ನು ಮತ್ತು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ತರಗತಿಗಳ ಪಾಠ್ಯಕ್ರಮವನ್ನು ಸಭೆಯು ಅನುಮೋದಿಸಿತು.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ಶಾಸ್ತ್ರಿ ಬಿ.ಎ ಪ್ರಥಮ ಹಾಗೂ ದ್ವಿತೀಯ ವರ್ಷದ ನೂತನ ಆಂಗ್ಲ ಮತ್ತು ಕನ್ನಡ ಪಠ್ಯಪುಸ್ತಕಗಳನ್ನು ಮುದ್ರಿಸುವ ಬಗೆಗೆ.**<br>2018–19ನೇ ಸಾಲಿನಲ್ಲಿ ಶಾಸ್ತ್ರಿ ಬಿ.ಎ ಪ್ರಥಮ ಹಾಗೂ ದ್ವಿತೀಯ ವರ್ಷದ ನೂತನ ಆಂಗ್ಲ ಮತ್ತು ಕನ್ನಡ ಪಠ್ಯಪುಸ್ತಕಗಳನ್ನು ಮುದ್ರಿಸಬೇಕಾಗಿದೆ. ಆಂಗ್ಲ ಪಠ್ಯಪುಸ್ತಕಗಳನ್ನು ಡಾ. ಮನು ಚಕ್ರವರ್ತಿಯವರು ಹಾಗೂ ಕನ್ನಡ ಪಠ್ಯಪುಸ್ತಕಗಳನ್ನು ಡಾ. ಎಸ್. ಎಲ್. ಶ್ರೀನಿವಾಸಮೂರ್ತಿಯವರು ಸಂಪಾದಿಸಿದ್ದಾರೆ. ಈ ಪಠ್ಯಪುಸ್ತಕಗಳ ಮುದ್ರಣಕ್ಕೆ ಮತ್ತು ಅಧ್ಯಯನ ಮಂಡಳಿಯ ರಚನೆಗಾಗಿ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಶಾಸ್ತ್ರಿ ಬಿ.ಎ ಪ್ರಥಮ ಹಾಗೂ ದ್ವಿತೀಯ ವರ್ಷದ ನೂತನ ಆಂಗ್ಲ ಮತ್ತು ಕನ್ನಡ ಪಠ್ಯಪುಸ್ತಕಗಳನ್ನು ಮುದ್ರಿಸಲು ಸಭೆಯು ಒಪ್ಪಿಗೆ ಸೂಚಿಸಿತು. ಭಾಷಾ ಪಠ್ಯರಚನಾ ಮಂಡಳಿಯನ್ನು ಈ ಕೆಳಕಂಡಂತೆ ರಚಿಸಿ ಪುಸ್ತಕದಲ್ಲಿ ನಮೂದಿಸಲು ಸಭೆಯು ಸೂಚಿಸಿತು.**<br>**ಸಂಪಾದಕ ಮಂಡಳಿ**<br>**ಪ್ರಧಾನ ಸಂಪಾದಕರು – ಪ್ರೊ. ಪದ್ಮಾಶೇಖರ್, ಕುಲಪತಿಗಳು**<br>**ಸಂಪಾದಕರು –**<br>**ಡಾ. ಮನು ಚಕ್ರವರ್ತಿ**<br>**ಡಾ. ಎಸ್. ಎಲ್. ಶ್ರೀನಿವಾಸಮೂರ್ತಿ**<br>**ಪ್ರೊ. ವಿ. ಗಿರೀಶ್ ಚಂದ್ರ** |

| | | |
|---|---|---|
| ವಿಷಯ 11 | ವಿಷಯ ಮತ್ತು ಟಿಪ್ಪಣಿ | **ಶಾಸ್ತ್ರಿ ಬಿ.ಎ ಪ್ರಥಮ ಹಾಗೂ ದ್ವಿತೀಯ ವರ್ಷದ ತರಗತಿಗಳ ಆರನೇ ಪತ್ರಿಕೆಯನ್ನು ಐಚ್ಛಿಕ ವಿಷಯಗಳ ಆಯ್ಕೆಯನ್ನು ಮಿತಿಗೊಳಿಸುವ ಬಗೆಗೆ**<br>ಶಾಸ್ತ್ರಿ ಬಿ.ಎ ಪ್ರಥಮ ಹಾಗೂ ದ್ವಿತೀಯ ವರ್ಷದ ತರಗತಿಗಳ ಆರನೇ ಪತ್ರಿಕೆಯ ಐಚ್ಛಿಕ ವಿಷಯಗಳಾಗಿ ಇತಿಹಾಸ/ಪುರಾಣ/ದರ್ಶನ/ಆನ್ವಯಿಕ ವಿಷಯ/ಭಾರತೀಯ ಇತಿಹಾಸ/ಸಂಗಣನ ಶಾಸ್ತ್ರ/ಆಂಗ್ಲ/ಕನ್ನಡ ಆಯ್ಕೆಯನ್ನು ವಿದ್ಯಾರ್ಥಿಗಳಿಗೆ ನೀಡಲಾಗಿತ್ತು. ಇವುಗಳ ಬದಲಾಗಿ ಆಂಗ್ಲ/ಕನ್ನಡ/ಭಾರತೀಯ ಇತಿಹಾಸ ಅಷ್ಟಕ್ಕೇ ಮಿತಿಗೊಳಿಸಿ ಬದಲಾಯಿಸಬಹುದಾಗಿದೆ. ಈ ವಿಷಯಗಳ ಆಯ್ಕೆಯಿಂದ ಬಿ.ಇಡಿ. ಮುಂತಾದ ಪದವಿಗಳಲ್ಲಿಯೂ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಈ ವಿಷಯಕ್ಕೆ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಶಾಸ್ತ್ರಿ/ಬಿ.ಎ ಪ್ರಥಮ ಹಾಗೂ ದ್ವಿತೀಯ ವರ್ಷದ ತರಗತಿಗಳ ಆರನೇ ಪತ್ರಿಕೆಯನ್ನು ಐಚ್ಛಿಕ ವಿಷಯಗಳ ಆಯ್ಕೆಯನ್ನು ಕನ್ನಡ/ಆಂಗ್ಲ/ಭಾರತೀಯ ಇತಿಹಾಸಕ್ಕಷ್ಟೇ ಮಿತಿಗೊಳಿಸಲು ಸಭೆಯು ಅನುಮೋದನೆ ನೀಡಿತು. 2018–19ನೇ ಸಾಲಿನಲ್ಲಿ ಶಾಸ್ತ್ರಿ/ಬಿ.ಎ ಪ್ರಥಮ ವರ್ಷದ ತರಗತಿಗಳ ವಿದ್ಯಾರ್ಥಿಗಳು ಭಾರತೀಯ ಇತಿಹಾಸವನ್ನೇ ಆಯ್ಕೆ ಮಾಡಿಕೊಳ್ಳುವಂತೆ ಎಲ್ಲಾ ಕಾಲೇಜುಗಳಿಗೆ ಸೂಚಿಸಲು ಸಭೆಯು ತಿಳಿಸಿತು. ಈ ಹಿಂದೆ ಬೇರೆ ವಿಷಯವನ್ನು ಆಯ್ಕೆ ಮಾಡಿಕೊಂಡ ಶಾಸ್ತ್ರಿ ಬಿ.ಎ ದ್ವಿತೀಯ ವರ್ಷದ ವಿದ್ಯಾರ್ಥಿಗಳು ತಾವು ಈಗಾಗಲೇ ಆಯ್ಕೆ ಮಾಡಿಕೊಂಡ ವಿಷಯವನ್ನು ಯಥಾವತ್ತಾಗಿ ಮುಂದುವರಿಸುವಂತೆ ತಿಳಿಸಲು ಸೂಚಿಸಿತು.** |
| ವಿಷಯ 12 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಗ್ರಂಥಗಳ ಕನ್ನಡಾನುವಾದ ಯೋಜನೆಯ ಬಗೆಗೆ.**<br>2018–19ನೇ ಸಾಲಿನಲ್ಲಿ ಸಂಸ್ಕೃತ ಹಾಗೂ ಶಾಸ್ತ್ರಗ್ರಂಥಗಳನ್ನು ಕನ್ನಡ ಸಾರಸ್ವತಲೋಕಕ್ಕೆ ನೀಡುವ ಸಂಬಂಧ ಅನುವಾದ ಯೋಜನೆಯನ್ನು ಹಮ್ಮಿಕೊಳ್ಳಲು ವಿಶ್ವವಿದ್ಯಾಲಯವು ಚಿಂತಿಸುತ್ತಿದೆ. ಅನುವಾದ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಲು ಅನುವಾದ ಯೋಜನೆ ಸಮಿತಿಯನ್ನು ರಚಿಸಬೇಕಿರುತ್ತದೆ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಡಾ. ಎಚ್.ವಿ. ನಾಗರಾಜ ರಾವ್ ಹಾಗೂ ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿಯವರನ್ನು ಈ ಯೋಜನೆಯಲ್ಲಿ ನಿಯೋಜಿಸಬಹುದಾಗಿದೆ. ಸದರಿ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಅನುವಾದ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಲು ಅನುವಾದ ಯೋಜನೆ ಸಮಿತಿಯನ್ನು ರಚಿಸುವುದಕ್ಕೆ ಸಭೆಯು ಅನುಮೋದನೆ ನೀಡಿತು.** |
| ವಿಷಯ 13 | ವಿಷಯ ಮತ್ತು ಟಿಪ್ಪಣಿ | **ವಿದೇಶೀಯ ವಿದ್ಯಾರ್ಥಿಗಳಿಗೆ ಅರ್ಹತಾ ಶುಲ್ಕವನ್ನು ನಿಗದಿಪಡಿಸುವ ಬಗೆಗೆ**<br>ಸಂಸ್ಕೃತ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ವಿದೇಶೀಯ ವಿದ್ಯಾರ್ಥಿಗಳು ಪ್ರವೇಶವನ್ನು ಬಯಸಿ ಬರುತ್ತಿರುವ ಹಿನ್ನೆಲೆಯಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಅರ್ಹತಾ ಶುಲ್ಕವನ್ನು ನಿಗದಿಪಡಿಸಬೇಕಿದೆ. ಇದರ ಜೊತೆಗೆ ಆಯಾ ಪದವಿಗಳ ನಿಗದಿತ ಶುಲ್ಕವನ್ನೂ ಪಾವತಿಸಬೇಕಿರುತ್ತದೆ. ಅರ್ಹತಾ ಶುಲ್ಕವನ್ನು ನಿಗದಿಪಡಿಸುವ ಸಂಬಂಧ ಸಭೆಯಲ್ಲಿ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | **ವಿದೇಶೀಯ ವಿದ್ಯಾರ್ಥಿಗಳಿಗೆ ಅರ್ಹತಾ ಶುಲ್ಕವನ್ನು ನಿಗದಿಪಡಿಸುವುದಕ್ಕೆ ಸಭೆಯು ಸಮ್ಮತಿ ಸೂಚಿಸಿದೆ. ಇದಕ್ಕೆ ಸಂಬಂಧಿಸಿದ ಶುಲ್ಕ ನಿಗದಿಪಡಿಸುವುದಕ್ಕಾಗಿ ಪ್ರಶಾಸನ ಸಮಿತಿಯಲ್ಲಿ ವಿಷಯ ಮಂಡಿಸಲು ತಿಳಿಸಿದೆ** |
| ವಿಷಯ 14 | ವಿಷಯ ಮತ್ತು ಟಿಪ್ಪಣಿ | **2018–19ನೇ ಸಾಲಿನ ಏಕರೂಪ ವೇಳಾಪಟ್ಟಿಯನ್ನು ಅಳವಡಿಸಿಕೊಳ್ಳುವ ಬಗೆಗೆ.**<br>ಕರ್ನಾಟಕ ಸರ್ಕಾರ: ಇಡಿ 121 ಯುಎನ್ಇ 2018ರ ಆದೇಶದಂತೆ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ವಿಶ್ವವಿದ್ಯಾಲಯಗಳ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಏಕರೂಪ ವೇಳಾಪಟ್ಟಿಯನ್ನು ಜಾರಿಗೊಳಿಸಲು ಸೂಚಿಸಿದ ಹಿನ್ನೆಲೆಯಲ್ಲಿ 2018–19ನೇ ಸಾಲಿಗೆ ಅನ್ವಯವಾಗುವಂತೆ ನಿಯಮಾನುಸಾರ ವೇಳಾಪಟ್ಟಿಯನ್ನು ತಯಾರಿಸಿ ಸಭೆಯ ಅನುಮೋದನೆಗಾಗಿ ಲಗತ್ತಿಸಿ ಸಲ್ಲಿಸಿದೆ. |
| | ನಿರ್ಣಯ | **2018–19ನೇ ಸಾಲಿಗೆ ವಿಶ್ವವಿದ್ಯಾಲಯದ ಕೋರ್ಸ್‌ಗಳಿಗೆ ಅನ್ವಯವಾಗುವಂತೆ ಏಕರೂಪ ವೇಳಾಪಟ್ಟಿಯನ್ನು ಮಾತ್ರ ಅಳವಡಿಸಲು ಸಭೆಯು ಸೂಚಿಸಿತು.** |
| ವಿಷಯ 15 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯವು ನೀಡುವ ಪಿಎಚ್.ಡಿ ಪದವಿ ಪ್ರಮಾಣಪತ್ರದಲ್ಲಿ ವಿಷಯವನ್ನು ಸ್ಪಷ್ಟವಾಗಿ ನಿರ್ದೇಶಿಸುವ ಬಗೆಗೆ**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಮುಂಬರುವ ಘಟಿಕೋತ್ಸವದಲ್ಲಿ ಪಿಎಚ್.ಡಿ ಪದವಿ ಪ್ರಮಾಣಪತ್ರದಲ್ಲಿ **ಪಿಎಚ್.ಡಿ ಸಂಸ್ಕೃತ** (.....ವಿಭಾಗ)/ **ವಿದ್ಯಾವಾರಿಧಿ ಸಂಸ್ಕೃತ** (....ವಿಭಾಗ) ಎಂದು ಪದವಿಯ ಹೆಸರನ್ನು ನಿರ್ದೇಶಿಸಬೇಕಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಘಟಿಕೋತ್ಸವದಲ್ಲಿ ಪಿಎಚ್.ಡಿ ಪದವಿ ಪ್ರಮಾಣಪತ್ರದಲ್ಲಿ ಪಿಎಚ್.ಡಿ ಸಂಸ್ಕೃತ (.....ವಿಭಾಗ)/ ವಿದ್ಯಾವಾರಿಧಿ ಸಂಸ್ಕೃತ (....ವಿಭಾಗ) ಎಂದು ಪದವಿಯ ಹೆಸರನ್ನು ನಿರ್ದೇಶಿಸಲು ಸಭೆಯು ಒಪ್ಪಿದೆ.** |
| ವಿಷಯ 16 | ವಿಷಯ ಮತ್ತು | **ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಯ ಅವಧಿ ವಿಸ್ತರಿಸುವ ಬಗೆಗೆ.**<br>ಪಿ.ಎಚ್.ಡಿ ಪದವಿಯ ಅವಧಿಯು ಈಗಾಗಲೇ 5 ವರ್ಷಗಳಾಗಿದ್ದು ಅದನ್ನು ಎರಡು ವರ್ಷಗಳ |

| | | |
|---|---|---|
| | ಟಿಪ್ಪಣಿ | ಕಾಲ ಹೆಚ್ಚಿಸಬಹುದಾಗಿದ್ದು, ಅದಕ್ಕೆ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಪದವಿಗೆ ಅವಧಿಯನ್ನು ವಿಸ್ತರಿಸಲು ಸಭೆಯು ಒಪ್ಪಿಗೆ ಸೂಚಿಸಿತು. ಇದಕ್ಕೆ ಶುಲ್ಕವನ್ನು ನಿಗದಿಪಡಿಸಲು ಪ್ರಶಾಸನಸಮಿತಿಯಲ್ಲಿ ವಿಷಯವನ್ನು ಮಂಡಿಸಲು ತಿಳಿಸಿತು.** |
| ವಿಷಯ 17 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಹಾಗೂ ಅಧೀನ ಕಾಲೇಜುಗಳಲ್ಲಿನ ದ್ವಿತೀಯ ಮೌಲ್ಯಮಾಪನವನ್ನು ರದ್ದುಗೊಳಿಸುವ ಬಗೆಗೆ.**<br>2018–19ನೇ ಸಾಲಿನಿಂದ ವಿಶ್ವವಿದ್ಯಾಲಯದ ಹಾಗೂ ಅಧೀನ ಕಾಲೇಜುಗಳಲ್ಲಿನ ಎಂ.ಎ ಆಚಾರ್ಯ ತರಗತಿಗಳ ಪರೀಕ್ಷಾ ಮೌಲ್ಯಮಾಪನವನ್ನು ಒಂದು ಬಾರಿ ಮಾಡುವುದರಿಂದಲೇ ಸ್ಪಷ್ಟವಾದ ಫಲಿತಾಂಶವು ದೊರೆಯುತ್ತಿರುವುದರಿಂದ ದ್ವಿತೀಯ ಮೌಲ್ಯಮಾಪನವನ್ನು ರದ್ದುಗೊಳಿಸಬಹುದಾಗಿದೆ. ಈ ಸಂಬಂಧ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಹಾಗೂ ಅಧೀನ ಕಾಲೇಜುಗಳಲ್ಲಿನ ದ್ವಿತೀಯ ಮೌಲ್ಯಮಾಪನವನ್ನು ರದ್ದುಗೊಳಿಸಲು ಸಭೆಯು ಸಮ್ಮತಿಸಿತು.** |
| ವಿಷಯ 18 | ವಿಷಯ ಮತ್ತು ಟಿಪ್ಪಣಿ | **ಬೌದ್ಧಧರ್ಮ ದರ್ಶನ ಹಾಗೂ ಪಾಲಿ ಸಾಹಿತ್ಯದಲ್ಲಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್ ಪ್ರಾರಂಭಿಸುವ ಬಗೆಗೆ.**<br>ವಿಶ್ವವಿದ್ಯಾಲಯವು ಬೌದ್ಧಧರ್ಮ ದರ್ಶನ ಹಾಗೂ ಪಾಲಿ ಸಾಹಿತ್ಯದಲ್ಲಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ನ್ನು ಪ್ರಾರಂಭಿಸಲು ಉದ್ದೇಶಿಸಿದ್ದು ಮಹಾಬೋಧಿ ಸೊಸೈಟಿಯ ಮಹಾಬೋಧಿ ಅಧ್ಯಯನ ಕೇಂದ್ರವು ಈ ಕೋರ್ಸ್‌ಗಳನ್ನು ನಡೆಸಲಿದೆ. ಇದಕ್ಕಾಗಿ ಬೌದ್ಧಧರ್ಮ ದರ್ಶನ ಹಾಗೂ ಪಾಲಿ ಸಾಹಿತ್ಯದಲ್ಲಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್ ನಡೆಸಲು 1. ಡಾ. ವೀರನಾರಾಯಣ ಪಾಂಡುರಂಗಿ 2. ಡಾ. ಎಂ. ಚಿನ್ನಸ್ವಾಮಿ, 3. ಪ್ರೊ. ಗೋಪಾಲಕೃಷ್ಣ 4. ಭಿಕ್ಕು ಬುದ್ಧದತ್ತ 5. ಡಾ. ಶರತ್‌ಚಂದ್ರ ಸ್ವಾಮಿ – ಇವರನ್ನು ಒಳಗೊಂಡ ಅಧ್ಯಯನ ಮಂಡಳಿ ರಚಿಸಲಾಗಿದೆ. ದಿನಾಂಕ: 18.06.2018ರಂದು ಅಧ್ಯಯನ ಮಂಡಳಿ ಸಭೆ ನಡೆಸಿ ಬೌದ್ಧಧರ್ಮ ದರ್ಶನ ಹಾಗೂ ಪಾಲಿ ಸಾಹಿತ್ಯದಲ್ಲಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್ ಪಾಠ್ಯಕ್ರಮವನ್ನು ಸಿದ್ಧಪಡಿಸಿದೆ. 2018–19ನೇ ಸಾಲಿನಿಂದಲೇ ಈ ತರಗತಿಗಳನ್ನು ನಡೆಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | **ಬೌದ್ಧಧರ್ಮ ದರ್ಶನ ಹಾಗೂ ಪಾಲಿ ಸಾಹಿತ್ಯದಲ್ಲಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ನ್ನು ಮಹಾಬೋಧಿ ಸೊಸೈಟಿಯ ಮಹಾಬೋಧಿ ಅಧ್ಯಯನ ಕೇಂದ್ರದಲ್ಲಿ ನಡೆಸಲು ಸಭೆಯು ಒಪ್ಪಿದೆ. ಈ ಕೋರ್ಸ್‌ಗೆ ವಿಶ್ವವಿದ್ಯಾಲಯದ ಪ್ರವೇಶಾತಿ ನಿಯಮಗಳನ್ನು ಯಥಾವತ್ತಾಗಿ ಅಳವಡಿಸಲು ಸಭೆಯು ಸೂಚಿಸಿತು.** |
| ವಿಷಯ 19 | ವಿಷಯ ಮತ್ತು ಟಿಪ್ಪಣಿ | **ಶ್ರೀ ವಿದ್ಯಾರಣ್ಯ ಸಂಸ್ಕೃತ ಪಾಠಶಾಲೆ, ಕೆಕ್ಕಾರು, ಹೊನ್ನಾವರ –ಇಲ್ಲಿ ಪಾಠಶಾಲೆಗೆ ಮಾನ್ಯತೆ ನವೀಕರಿಸುವ ಬಗೆಗೆ.**<br>ಶ್ರೀ ವಿದ್ಯಾರಣ್ಯ ಸಂಸ್ಕೃತ ಪಾಠಶಾಲೆ, ಕೆಕ್ಕಾರು. ಹೊನ್ನಾವರ – ಇಲ್ಲಿ ಪ್ರಥಮಾ ಮತ್ತು ಕಾವ್ಯ ತರಗತಿಗಳು ಅನುದಾನ ಸಹಿತವಾಗಿ ಖಾಯಂ ಮಾನ್ಯತೆ ಹೊಂದಿವೆ. ಸಾಹಿತ್ಯ ತರಗತಿಗಳು ಅನುದಾನ ರಹಿತವಾಗಿ 2009–10ನೇ ಸಾಲಿನಿಂದ ನಡೆಯುತ್ತಿದೆ. 2009–10ನೇ ಸಾಲಿನಿಂದಲೂ ಪರೀಕ್ಷೆಗಳನ್ನು ನಡೆಸುತ್ತಾ ಬಂದಿರುತ್ತಾರೆ. 2009–10ನೇ ಸಾಲಿನಿಂದ 2017–18ನೇ ಸಾಲಿನವರೆಗೆ ಮಾನ್ಯತೆ ನವೀಕರಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | **ಶ್ರೀ ವಿದ್ಯಾರಣ್ಯ ಸಂಸ್ಕೃತ ಪಾಠಶಾಲೆ, ಕೆಕ್ಕಾರು, ಹೊನ್ನಾವರ– ಇದನ್ನು ದಂಡಶುಲ್ಕ ಸ್ವೀಕರಿಸಿ ಮಾನ್ಯತೆ ನವೀಕರಿಸಲು ಸಭೆಯು ಒಪ್ಪಿತು.** |
| ವಿಷಯ 20 | ವಿಷಯ ಮತ್ತು ಟಿಪ್ಪಣಿ | **SWAYAM ಕೋರ್ಸ್ ಗಳಿಗೆ ಅನುಮೋದನೆ ನೀಡುವ ಬಗೆಗೆ.**<br>ವಿಶ್ವವಿದ್ಯಾಲಯ ಅನುದಾನ ಆಯೋಗದ ಹೆಚ್ಚುವರಿ ಕಾರ್ಯದರ್ಶಿಗಳು ವಿಶ್ವವಿದ್ಯಾಲಯದ ಕುಲಪತಿಗಳಿಗೆ ಅರೆಸರ್ಕಾರಿ ಪತ್ರ ಸಂಖ್ಯೆ: D.O.No.F.1-2/2018/ASI/vcconf/1dated – 14.06.2018ದ ವಿಷಯ ಸಂಖ್ಯೆ 1)ರ ಅನ್ವಯ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನಲ್ಲಿ www.swayam.gov.in ನಲ್ಲಿ ಲಭ್ಯವಿರುವ ಕೋರ್ಸುಗಳ ಅನುಮೋದನೆಯನ್ನು ತೆಗೆದುಕೊಳ್ಳಬೇಕಿದೆ. ಇದರಿಂದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಲಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **SWAYAM ಕೋರ್ಸ್ ಗಳಿಗೆ ಸಭೆಯು ಅನುಮೋದನೆ ನೀಡಿತು.** |
| ವಿಷಯ 21 | ವಿಷಯ ಮತ್ತು | **ಜ್ಯೋತಿಷ– ವಾಸ್ತು ಶಾಸ್ತ್ರಗಳಿಗಾಗಿ BOS ಸದಸ್ಯರನ್ನು ನೇಮಿಸಿರುವುದನ್ನು ಅನುಮೋದಿಸುವ ಬಗೆಗೆ,**<br>ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಜ್ಯೋತಿಷ– ವಾಸ್ತು ಶಾಸ್ತ್ರಗಳಲ್ಲಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ |

| | | |
|---|---|---|
| | ಟಿಪ್ಪಣಿ | ಕೋರ್ಸ್‌ಗಳನ್ನು ಸಂಯೋಜನೆ ಮಾಡಲಾಗುತ್ತಿದೆ. ಆದರೆ ಈವರೆಗೂ ಈ ಕೋರ್ಸ್ ಗಳಿಗಾಗಿ BOS ಸದಸ್ಯರನ್ನು ನಿರ್ದಿಷ್ಟಪಡಿಸಿರುವುದಿಲ್ಲ. ಆದ್ದರಿಂದ ಈಗ ವಿಶ್ವವಿದ್ಯಾಲಯದಲ್ಲಿ ಈ ಕೆಳಕಂಡ ಸದಸ್ಯರನ್ನು BOS ಗೆ ಶಿಫಾರಸ್ಸು ಮಾಡಲಾಗಿದೆ.<br>**1. ಡಾ. ಭಾಸ್ಕರ ಭಟ್ ಜೋಶಿ – ಅಧ್ಯಕ್ಷರು**<br>**2. ಡಾ. ಎಸ್. ಕೃಷ್ಣಕುಮಾರ್ – ಸದಸ್ಯರು**<br>**3. ಶ್ರೀ ಬಿ ಗಜೇಂದ್ರ – ಸದಸ್ಯರು**<br>**4. ಡಾ. ಬಿ.ಕೆ ಸಾಯಿನಾಥ ಗಂಡ್ಲೂರ್ – ಸದಸ್ಯರು**<br>**5. ಪ್ರೊ. ಟಿ ಆರ್ ವಿಜಯಕುಮಾರ್ – ಸದಸ್ಯರು**<br>**6. ಡಾ. ಜೆ ಹರಿದಾಸ್ – ಸದಸ್ಯರು**<br>**7. ಡಾ. ಅನಂತರಾಘವನ್ ಬಿ.ಎನ್ – ಸದಸ್ಯರು**<br>**8. ಶ್ರೀ ಗಣೇಶ ಹೆಗಡೆ – ಸದಸ್ಯರು**<br>ಇದಕ್ಕೆ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆ ಕೋರಿದೆ. |
| | ನಿರ್ಣಯ | **ಜ್ಯೋತಿಷ– ವಾಸ್ತು ಶಾಸ್ತ್ರಗಳಿಗಾಗಿ BOS ಸದಸ್ಯರನ್ನು ನೇಮಿಸಿರುವುದಕ್ಕೆ ಸಭೆಯು ಒಪ್ಪಿದೆ.** |
| ವಿಷಯ 22 | ವಿಷಯ ಮತ್ತು ಟಿಪ್ಪಣಿ | **ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ), ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ. – ಇದರ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಉದ್ದಾನೇಶ್ವರ ವೇದ – ಸಂಸ್ಕೃತ ಪಾಠಶಾಲೆ, ಮತ್ತು ಶ್ರೀ ಶಿವಕುಮಾರ ಸ್ವಾಮೀಜಿ ವೇದ – ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ ಈ ಪಾಠಶಾಲೆಗಳಲ್ಲಿನ ಸಾಹಿತ್ಯ ತರಗತಿಗಳ ಸಹ ಶಿಕ್ಷಕ ಹುದ್ದೆಗಳನ್ನು ಸಾಹಿತ್ಯ ವೇತನಶ್ರೇಣಿಗೆ ಮೇಲ್ದರ್ಜೆಗೇರಿಸಿ ಅನುಮೋದಿಸುವ ಬಗೆಗೆ,**<br>ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ), ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ. – ಇದರ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಉದ್ದಾನೇಶ್ವರ ವೇದ–ಸಂಸ್ಕೃತ ಪಾಠಶಾಲೆ, ಮತ್ತು ಶ್ರೀ ಶಿವಕುಮಾರ ಸ್ವಾಮೀಜಿ ವೇದ – ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ – ಈ ಎರಡೂ ಪಾಠಶಾಲೆಗಳಲ್ಲಿನ ಒಟ್ಟು 06 ಸಹ ಶಿಕ್ಷಕ ಹುದ್ದೆಗಳನ್ನು ಸಾಹಿತ್ಯ ವೇತನಶ್ರೇಣಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ), ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ. – ಇದರ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಉದ್ದಾನೇಶ್ವರ ವೇದ – ಸಂಸ್ಕೃತ ಪಾಠಶಾಲೆ, ಮತ್ತು ಶ್ರೀ ಶಿವಕುಮಾರ ಸ್ವಾಮೀಜಿ ವೇದ – ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾ ಮಠ, ತುಮಕೂರು ತಾ॥, ಜಿಲ್ಲೆ ಈ ಪಾಠಶಾಲೆಗಳಲ್ಲಿನ ಸಾಹಿತ್ಯ ತರಗತಿಗಳ ಸಹ ಶಿಕ್ಷಕ ಹುದ್ದೆಗಳನ್ನು ಸಾಹಿತ್ಯ ವೇತನಶ್ರೇಣಿಗೆ ಮೇಲ್ದರ್ಜೆಗೇರಿಸಿ ಅನುಮೋದಿಸಲು ನಿಯಮಾನುಸಾರ ಅವಕಾಶವಿದ್ದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮತಿಸಿದೆ. ಇದನ್ನು ಮರುಪರಿಶೀಲಿಸಲು ಪ್ರಶಾಸನ ಸಮಿತಿಯಲ್ಲಿ ವಿಷಯ ಮಂಡಿಸಲು ಸಭೆಯು ಸೂಚಿಸಿತು.** |
| ವಿಷಯ 23 | ವಿಷಯ ಮತ್ತು ಟಿಪ್ಪಣಿ | **2017–18ನೇ ಸಾಲಿನ ಜಮಾ–ಖರ್ಚು ತಃಖ್ತೆಗಳನ್ನು ಪರಿಶೀಲಿಸಿ ಆಡಿಟ್ ಮಾಡಿಸಲು ಸಭೆಯ ಅನುಮೋದನೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2017–18 ನೇ ಸಾಲಿನ ಜಮಾ ಮತ್ತು ಖರ್ಚಿನ ಲೆಕ್ಕಪತ್ರಗಳು ಅಂತಿಮಗೊಂಡಿದ್ದು ದಿನಾಂಕ: 31.05.2018ರಂದು ನಡೆದ ಹಣಕಾಸು ಸಮಿತಿಯಲ್ಲಿ ಮಂಡಿಸಲಾಗಿತ್ತು. 2017–18ನೇ ಸಾಲಿನ ಲೆಕ್ಕಪರಿಶೋಧನೆ ನಡೆಸಲು ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರನ್ನು ಆಹ್ವಾನಿಸಲು ಹಣಕಾಸು ಸಮಿತಿಯ ಒಪ್ಪಿಗೆ ದೊರೆಯುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದು ಪ್ರಶಿಕ್ಷಣ ಸಭೆಯ ಅನುಮೋದನೆಗಾಗಿ ಕೋರಿದೆ. |
| | ನಿರ್ಣಯ | **2017–18ನೇ ಸಾಲಿನ ಜಮಾ–ಖರ್ಚು ತಃಖ್ತೆಗಳನ್ನು ಪರಿಶೀಲಿಸಿ ಆಡಿಟ್ ಮಾಡಿಸಲು ಪ್ರಶಿಕ್ಷಣ ಸಮಿತಿಯು ಅನುಮೋದಿಸಿತು.** |

**ಶ್ರೀಮತಿ ಎಂ. ಶಿಲ್ಪ, ಕ.ಆ.ಸೇ.**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು